ಆರಾಧನಾ ಯೋಜನೆ ಕುರಿತು

1747 (1934) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಆರಾಧನಾ ಯೋಜನೆಯಲ್ಲಿ ಜಿಲ್ಲಾವಾರು ದೇವಾಲಯಗಳನ್ನು ಕಟ್ಟಲು ನಿಗದಿ ಮಾಡಿದ ಹಣವೆಷ್ಟು; ಹಾಗೂ ವೆಚ್ಚ ಮಾಡಿದ ಹಣವೆಷ್ಟು;

ಆ) ಈ ಯೋಜನೆಯಲ್ಲಿ ಇದುವರೆಗೂ ಕಟ್ಟಿಸಲಾದ ಜಿಲ್ಲಾವಾರು ದೇವಾಲಯಗಳೆಷ್ಟು ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಆರಾಧನಾ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ವಿವರ ಕೆಳಕಡಂತೆ ಇರುತ್ತದೆ.

1999-2000	400.00 ಲಕ್ಷ
2000-2001	500.00 ಲಕ್ಷ
2001-2002	490.00 ಲಕ್ಷ

ಆರಾಧನಾ ಯೋಜನೆಯಡಿ ಅನುದಾನವನ್ನು ಉತ್ತರ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಕ್ಷೇತ್ರಕ್ಕೆ ತಾಲ್ಲೂಕುವಾರು ಹಾಗೂ ರಾಜ್ಯದ ಉಳಿದ ಪ್ರದೇಶಗಳಿಗೆ ವಿಧಾನ ಸಭಾ ಕ್ಷೇತ್ರವಾರು ಬಿಡುಗಡೆ ಮಾಡಲಾಗುತ್ತಿದ್ದು, ಈ ಯೋಜನೆ ಅನುಷ್ಠಾನಕ್ಕೆ ಬಂದಾಗಿನಿಂದ (1991-1992 ರಿಂದ 2001-2002) ಇಲ್ಲಿಯವರೆಗೆ ಒಟ್ಟು ರೂ. 58,11,000-00 ಗಳನ್ನು ಸರ್ಕಾರ ಬಿಡುಗಡೆ ಮಾಡಿರುತ್ತದೆ. ಈ ಹಣದಲ್ಲಿ ಒಟ್ಟು ರೂ. 36,28,17,805-00 ಖರ್ಚಾಗಿರುತ್ತದೆ.

ಆ. ಈವರೆವಿಗೂ 23840ಗಳ ಕಾಮಗಾರಿ ಕೈಗೊಂಡಿದೆ 17075 ಕಾಮಗಾರಿಗಳು ಪೂರ್ಣಗೊಂಡಿದ್ದು, 6765 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. (ಜಿಲ್ಲಾವಾರು ವಿವರ ಪಟ್ಟಿ ಲಗತ್ತಿಸಿದೆ).

ಆರಾಧನಾ ಯೋಜನೆಯಡಿ 1991-1992 ರಿಂದ 2001-2002ರವರೆಗೆ ಮಂಜೂರಾದ ಅನುದಾನ ಕಾಮಗಾರಿ ಕೈಗೊಂಡ ಜಿಲ್ಲಾವಾರು ವಿವರ

ಜಿಲ್ಲೆ	1991-1992 ರಿಂದ 2001-202 ಬಿಡುಗಡೆ ಮಾಡಿದ ವಿವರ	ವೆಚ್ಚ	ಉಳಿಕೆ	ಕೈಗೊಂಡ ಕಾಮಗಾರಿ	ಪೂರ್ಣಗೊಂಡ ಕಾಮಗಾರಿ	ಪ್ರಗತಿ
ಬೆಂಗಳೂರು ನಗರ	42791991	24008932	18783060	773	400	313
ಬೆಂಗಳೂರು ಗ್ರಾಮಾಂತರ	23594468	16789735	6804733	907	294	613
ಕೋಲಾರ	30288756	6970138	23318618	754	387	367
ಮಂಡ್ಯ	22393137	15699125	6694012	1258	940	318
ಮೈಸೂರು	27714876	14025342	13689534	491	301	190
ತುಮಕೂರು	33998976	26608861	7390115	2449	1843	606

1	2	3	4	5	6	7
ಚಿತ್ರದುರ್ಗ	22236352	12099266	10137086	1011	789	222
ದಾವಣಗೆರೆ	8368212	1531417	6836795	-	-	-
ಚಾಮರಾಜನಗರ	12593479	8972631	3620848	304	140	164
ಬಳ್ಳಾರಿ	21160051	17010564	4149487	1095	1025	70
ಶಿವಮೊಗ್ಗ	22835185	14686138	8149047	1250	980	270
ಚಿಕ್ಕಮಗಳೂರು	16860375	10587400	6272975	788	592	196
ಹಾಸನ	20359677	18439723	1919954	1120	1030	90
ಕೊಡಗು	7551679	6851117	700562	384	354	30
ಉತ್ತರ ಕನ್ನಡ ಜಿಲ್ಲೆ	23372238	18155563	5216675	956	772	184
ಉಡುಪಿ	16480484	15089473	1391011	526	473	53
ದಕ್ಷಿಣ ಕನ್ನಡ ಜಿಲ್ಲೆ	21954411	19025680	2928731	643	576	67
ಧಾರವಾಡ	16872273	1410900	2763273	1030	802	226
ಗದಗ್	12130521	7718991	4411530	782	509	273
ಹಾವೇರಿ	15652480	30683226	12584154	806	218	588
ಬೆಳಗಾಂ	44655344	26674970	17980374	1740	1447	293
ಬಿಜಾಪುರ	21398981	1965245	1746636	948	838	110
ಬಾಗಲಕೋಟೆ	15835914	13642014	2193900	829	654	175
ರಾಯಚೂರು	22461686	13096148	9365538	1842	1242	600
ಕೊಪ್ಪಳ	5078619	-	5078619	-	-	-
ಬೀದರ್	14972858	14165496	10801548	87	87	-
ಗುಲ್ಬರ್ಗಾ	32486976	14165496	18321480	1067	320	747
ಹೊರರಾಜ್ಯ ಕರ್ನಾಟಕ ರಾಜ್ಯ ಛತ್ರ ತಿರುಮಲ-ತಿರುಪತಿ	5000000	-	5000000	-	-	-
ಒಟ್ಟು	**581100000**	**362817805**	**218282195**	**23840**	**17075**	**6765**

ಧಾರವಾಡ ನಗರದ ಲೋಕೋಪಯೋಗಿ ರಸ್ತೆಗಳ ನಿರ್ವಹಣೆ

1748 (2345) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರದ ಲೋಕೋಪಯೋಗಿ ರಸ್ತೆಗಳು ಯಾವುವು; (ಅವುಗಳ ಉದ್ದ-ಅಗಲ ಮಾಹಿತಿ ವಿವರವಾಗಿ ನೀಡುವುದು)

ಆ) ಸದರಿ ರಸ್ತೆಗಳ ಅಗಲೀಕರಣ, ಜೋಡು ರಸ್ತೆ, ಮಾಡುವ ಬೇಡಿಕೆಯ ಪ್ರಸ್ತಾವನೆ ಸರ್ಕಾರದಲ್ಲಿ ಇದ್ದು, ಯಾವಾಗ ಅನುಮೋದನೆ ನೀಡಲಾಗುವುದು;